ಫೋಟೊ ರೇಷನ್ ಕಾರ್ಡ್‌ಗಳ ಬಗ್ಗೆ

156 - ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯದಲ್ಲಿ ಸರ್ಕಾರ ಕಳೆದ ಒಂದು ವರ್ಷದಲ್ಲಿ ಎಷ್ಟು ಫೋಟೊ ರೇಷನ್ ಕಾರ್ಡ್‌ಗಳನ್ನು ಪತ್ತೆ ಹಚ್ಚಿದೆ;*

ಆ) *ತಪ್ಪಿತಸ್ಥರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ;*

ಇ) *ಮುಂದೆ ಈ ರೀತಿ ಆಗದಂತೆ ಯಾವ ಯಾವ ಮುಂಜಾಗ್ರತೆಯ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ?*

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ರಾಜ್ಯದಲ್ಲಿ ಇಲ್ಲಿಯವರೆಗೆ 215609 ಫೋಟೊ ಪಡಿತರ ಚೀಟಿಗಳನ್ನು 31-13-95ರವರೆಗೆ ಪತ್ತೆ ಹಚ್ಚಲಾಗಿದೆ.

ಆ) ಅಗತ್ಯ ವಸ್ತು ಕಾಯಿದೆ ಪ್ರಕಾರ ಸದರಿ ನ್ಯಾಯ ಬೆಲೆ ಅಂಗಡಿಯ ಮೇಲೆ ಕ್ರಮ ಜರುಗಿಸಲಾಗುತ್ತದೆ. ಹಾಗೂ ಪಡಿತರ ಚೀಟಿ ನೀಡಿದ ಅಧಿಕಾರಿ: ಸಿಬ್ಬಂದಿ ಮೇಲೆ ಸಿಸಿಎ ಪ್ರಕಾರ ಸೂಕ್ತ ಕ್ರಮ ಜರುಗಿಸಲಾಗುತ್ತದೆ.

ಇ) ರಾಜ್ಯಾದ್ಯಾಂತ ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರುಗಳ ಹಂತದಿಂದ ಆಹಾರ ನಿರೀಕ್ಷಕರ ಹಂತದವರೆಗೆ ಪ್ರತಿಯೊಬ್ಬರಿಗೂ ನಕಲಿ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲು ಗುರಿ ನಿಗದಿಪಡಿಸಿದ್ದು ಕಾರ್ಯ ವೈಖರಿಯನ್ನು ಆಗಿಂದಾಗ್ಗೆ ವಿಮರ್ಶಿಸಲಾಗುತ್ತಿದೆ.

ಹೊಸ ರೇಷನ್ ಕಾರ್ಡ್‌ಗಳು

163 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಕಳೆದ ಆರು ತಿಂಗಳಲ್ಲಿ ಎಷ್ಟು ಹೊಸ ರೇಷನ್ ಕಾರ್ಡ್‌ಗಳನ್ನು ಹಂಚಲಾಗಿದೆ;*

ಆ) *ಅವುಗಳಲ್ಲಿ ಹಸಿರು ಕಾರ್ಡುಗಳು ಎಷ್ಟು;*

ಇ) *ಇನ್ನೂ ಎಷ್ಟು ಹೊಸ ರೇಷನ್ ಕಾರ್ಡುಗಳಿಗೆ ಬೇಡಿಕೆ ಇದೆ;*

ಈ) *ಬೇಡಿಕೆ ಇದ್ದಲ್ಲಿ ಆ ಕುರಿತು ಸರ್ಕಾರ ಕೈಕೊಂಡ ಕ್ರಮಗಳೇನು?*

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಹುಬ್ಬಳ್ಳಿ ಮಹಾನಗರದಲ್ಲಿ 11,870 ಹಾಗೂ ಧಾರವಾಡ ಮಹಾನಗರದಲ್ಲಿ 4,439 ಪಡಿತರ ಚೀಟಿಗಳನ್ನು ಕಳೆದ 6 ತಿಂಗಳಿನಲ್ಲಿ ವಿತರಿಸಲಾಗಿದೆ.

ಆ) ಹುಬ್ಬಳ್ಳಿ - 14,249
ಧಾರವಾಡ - 3,960

ಇ) ಈಗ ಫೋಟೋ ಪಡಿತರ ಚೀಟಿಗೆ ಮಾತ್ರ ಬೇಡಿಕೆ ಇದ್ದು, ವಿವರಗಳು ಕೆಳಕಂಡಂತಿದೆ.

ಹುಬ್ಬಳ್ಳಿ	-	177
ಧಾರವಾಡ	-	254
ಒಟ್ಟು	-	431

ಈ) 20,000 ಫೋಟೋ ಪಡಿತರ ಚೀಟಿ ಹಾಗ 65,811 ಹಸಿರು ಚೀಟಿಗಳನ್ನು ಧಾರವಾಡ ಜಿಲ್ಲೆಗೆ ಹಂಚಿಕೆ ಮಾಡಲಾಗಿದೆ.

ಹುಬ್ಬಳ್ಳಿ - ಧಾರವಾಡ ಬೈಪಾಸ್ ರಸ್ತೆ ನಿರ್ಮಾಣ

162-ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಹುಬ್ಬಳ್ಳಿ-ಧಾರವಾಡ ಹೊರವಲಯದಲ್ಲಿ ನಿರ್ಮಾಣವಾಗುತ್ತಿರುವ ಬೈಪಾಸ್ ರಸ್ತೆ ನಿರ್ಮಾಣ 1996 ಮಾರ್ಚ್ ಅಂತ್ಯದಲ್ಲಿ ಮುಕ್ತಾಯಗೊಳ್ಳುವುದೇ?*

ಆ) *ಮುಕ್ತಾಯಗೊಳ್ಳದೆ ಇದ್ದಲ್ಲಿ ಅದಕ್ಕೆ ಇರುವ ಅಡ್ಡಿ ಆತಂಕಗಳೇನು;*

ಇ) *ಹಾಗಿದ್ದಲ್ಲಿ ಅವುಗಳ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?*

ಈ) *ಇನ್ನು ಎಷ್ಟು ಸಮಯದಲ್ಲಿ ಈ ರಸ್ತೆ ನಿರ್ಮಾಣದ ಕೆಲಸ ಪೂರ್ಣಗೊಳ್ಳುವುದು?*

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಈಗ ತೆಗೆದುಕೊಂಡಿರುವ ಹುಬ್ಬಳ್ಳಿ - ಧಾರವಾಡ ಬೈಪಾಸ್ ರಸ್ತೆಯ ಮೊದಲನೇ ಹಂತದ ಕೆಲಸದಲ್ಲಿ (ಅಂದರೆ ಹೆಬ್ಬುರಿನಿಂದ ಯಾರೆಕೊಪ್ಪದವರೆಗೆ) ಕಿ.ಮೀ. 29.993 ರಿಂದ ಕಿ.ಮೀ. 12.475ರ ವರೆಗೆ) ಡಾಂಬರೀಕರಣದ ಕಾಮಗಾರಿ ಹೊರತು ಪಡಿಸಿ, ಬಾಕಿ ಉಳಿದ ಕೆಲಸಗಳು ಅಂದರೆ ಡಬ್ಲ್ಯೂ.ಬಿ.ಎಂ. ಕಾಮಗಾರಿಯನ್ನು ಮಾರ್ಚ್ 1996 ಅಂತ್ಯದಲ್ಲಿ ಮುಕ್ತಾಯಗೊಳಿಸಿ ವಾಹನಗಳನ್ನು ಸದರಿ ರಸ್ತೆಯಲ್ಲಿ ಬಿಡಲಾಗುವುದು.

ಆ) ಭಾಗಶಃ ಗುತ್ತಿಗೆದಾರರು ಮಂದಗತಿಯಲ್ಲಿ ಕೆಲಸ ನಿರ್ವಹಿಸುತ್ತಿರುವುದು, ಧಾರವಾಡ ಸುತ್ತ ಮುತ್ತ ಜಲ್ಲೆಯ ಅಭಾವ.

ಇ) ಗುತ್ತಿಗೆದಾರರು ಕೆಲಸ ಚುರುಕುಗೊಳಿಸುವಂತೆ ತಿಳಿಸಿದ್ದು, ಅವರು ಜಲ್ಲೆ ಇತ್ಯಾದಿ ಸಂಗ್ರಹಿಸಿ ಕೆಲಸವನ್ನು ಮಾಡಿಸಲಾಗುತ್ತಿದೆ.

ಈ) ಡಬ್ಲ್ಯೂ.ಬಿ.ಎಂ. ಕೆಲಸವನ್ನು ಮಾರ್ಚ್ ಅಂತ್ಯಕ್ಕೆ ಮುಗಸಿ ಮೇ 1996ರ ತೊಳಗೆ ಡಾಂಬರೀಕರಣ ಮುಗಿಸಲಾಗುವುದು.

ಹುಬ್ಬಳ್ಳಿ ಗ್ರಾಮೀಣಾ ಪ್ರದೇಶದಲ್ಲಿ ಕುಡಿಯುವ ನೀರು ವಿಷಪೂರಿತವಾಗಿರುವುದು

154-ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದ ಕಿರೇಸೂರ, ಹೆಬ್ಬಸೂರ ಮತ್ತು ಸುಳ್ಳ ಗ್ರಾಮಗಳಲ್ಲಿ ಕುಡಿಯುವ ನೀರಿಗಾಗಿ ಉಪಯೋಗಿಸುವ ಕೆರೆಗಳ ನೀರು ವಿಷಪೂರಿತವಾಗಿದ್ದು ಕುಡಿಯಲು ಯೋಗ್ಯವಿಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?*

ಆ) *ಬಂದಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪ.ರಾಜ್ ಸಚಿವರು) :

ಅ) ಕಿರೇಸೂರ ಮತ್ತು ಹೆಬ್ಬಸೂರ ಗ್ರಾಮಗಳಲ್ಲಿ ಕುಡಿಯುವ ನೀರು ಯೋಗ್ಯವಿಲ್ಲವೆಂಬ ದೂರು ಸರ್ಕಾರದ ಗಮನಕ್ಕೆ ಬಂದಿದೆ. ಸುಳ್ಳ ಗ್ರಾಮದಲ್ಲಿ ಕುಡಿಯುವ ನೀರಿನ ಯಾವುದೇ ಕೆರೆ ಇರುವುದಿಲ್ಲ.

ಆ) ಕಿರೇಸೂರ ಹಾಗೂ ಹೆಬ್ಬಸೂರ ಗ್ರಾಮಗಳಲ್ಲಿ ಕುಡಿಯುವ ನೀರಿನ ಕೆರೆಗಳ ರಾಸಾಯನಿಕ ವಿಶ್ಲೇಷಣೆ ಮಾಡಿಸಲಾಗುತ್ತಿದ್ದು ವರದಿಯ ಫಲಿತಾಂಶಗಳಲ್ಲಿ ನೀರು ದೋಷಪೂರಿತವಾಗಿದ್ದು ಕಂಡುಬಂದಲ್ಲಿ ಗ್ರಾಮವಾಸಿಗಳಿಗೆ ಜಿಲ್ಲಾ ಪಡಳಿತ ಮತಿಯಿಂದ